KSRTC	2005–06	101.99	26.78
BMTC	2005–06	149.16	114.88
NEKRTC	2005–06	0.17	27.79(ನಷ್ಟ)
NWKRTC	2005–06	11.48	30.19(ನಷ್ಟ)

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಪ್ರಯಾಣ ದರಗಳು ಪ್ರಯಾಣಿಕರಿಗೆ ತೊಂದರೆಯಾಗುವಷ್ಟು ದುಬಾರಿಯಾಗಿರುವುದಿಲ್ಲ.

ಇ) ನಗರ ಸಾರಿಗೆಯಲ್ಲಿ ಕೇವಲ ಲಾಭವನ್ನು ಗುರಿಯಾಗಿಟ್ಟುಕೊಂಡು ದರವನ್ನು ನಿಗದಿಪಡಿಸುತ್ತಿಲ್ಲ.

ಈ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒಂದು ಉತ್ತಮ ಸಾರ್ವಜನಿಕ ನಗರ ಸಾರಿಗೆ ವ್ಯವಸ್ಥೆಯಾಗಿದ್ದು ಎಲ್ಲಾ ವರ್ಗದ ಸಾರ್ವಜನಿಕರ ಶ್ರೇಯೋಭಿವೃದ್ಧಿಗೆ ಗಣನೀಯ ಸೇವೆ ಸಲ್ಲಿಸುತ್ತಿದ್ದು ಸಮಾಜದ ಎಲ್ಲಾ ವರ್ಗದವರಿಂದ ಆಕರ್ಷಿಸಲ್ಪಟ್ಟಿದೆ. ವಾಯುಮಾಲಿನ್ಯವನ್ನು ತಡೆಗಟ್ಟಲು ಯೂರೋ–3 ಇಂಜಿನ್‌ವುಳ್ಳ ವಾಹನಗಳನ್ನು ಹಾಗೂ ಹವಾನಿಯಂತ್ರಿತ ವೋಲ್ವೋ ಬಸ್‌ಗಳನ್ನು ಸಹ ಪರಿಚಯಿಸುತ್ತಿದೆ. ಈ ಎಲ್ಲಾ ಸೌಕರ್ಯಗಳನ್ನು ಒದಗಿಸಬೇಕಾದಲ್ಲಿ ಸಂಸ್ಥೆಯು ಆರ್ಥಿಕ ಸಾಮರ್ಥ್ಯವನ್ನು ಹೊಂದ ಬೇಕಾಗಿರುತ್ತದೆ. ಆದುದರಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒತ್ತಾಯಪೂರ್ವಕವಾಗಿ ಸಾರಿಗೆ ದರವನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಿರುತ್ತದೆ.

512 ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಟ್ಟೂರು–ಹರಿಹರ ರೈಲ್ವೆ ಕಾಮಗಾರಿಗೆ 2006–07ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು ;

ಆ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ; ಇವುಗಳನ್ನು ಪೂರ್ಣಗೊಳಿಸಲು ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು ;

ಇ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಿ ಸಾರ್ವಜನಿಕರ ಅನುಕೂಲಕ್ಕೆ ಒದಗಿಸಿಕೊಡಲಾಗುವುದು?

ಶ್ರೀ ಶ್ರೀರಾಮುಲು (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ರಾಜ್ಯ ಸರ್ಕಾರ ಕೊಟ್ಟೂರು–ಹರಿಹರ ರೈಲ್ವೆ ಕಾಮಗಾರಿಗೆ 2006–07ನೇ ಸಾಲಿನಲ್ಲಿ ರೂ. 35.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿದೆ.

ಆ) ಈ ರೈಲ್ವೆ ಮಾರ್ಗದ ಪೂರ್ಣ ವಿಭಾಗದಲ್ಲಿ ಭೂಸ್ವಾಧೀನ ಕಾಮಗಾರಿಯು ಹಾಗೂ ಸೇತುವೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಯನ್ನು ಆದ್ಯತೆಯ ಮೇಲೆ ಕೈಗೊಳ್ಳಲು ರೈಲ್ವೆ ಮಂತ್ರಾಲಯವನ್ನು ಕೋರಲಾಗಿದೆ. ಹಾಗೂ ಈ ಯೋಜನೆಯನ್ನು ಹಾಸನ–ಮಂಗಳೂರು ರೈಲು ಅಭಿವೃದ್ಧಿ ನಿಗಮದ ಮಾದರಿಯಲ್ಲಿ PPP ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಅಧ್ಯಕ್ಷರು ರೈಲ್ವೆ ಬೋರ್ಡ್ ಇವರಿಗೆ ಪತ್ರವನ್ನು ಬರೆಯಲಾಗಿರುತ್ತದೆ. ಮಾನ್ಯ ಮುಖ್ಯ ಮಂತ್ರಿಯವರು ರೈಲ್ವೆ ಸಚಿವರಿಗೂ ಪತ್ರ ಬರೆದು ಈ ಯೋಜನೆಯನ್ನು ಜಾರಿಗೊಳಿಸಲು ವಿಶೇಷ ಉದ್ದೇಶಕ ವಾಹಕವನ್ನು PPP ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಅಥವಾ ರಾಜ್ಯ ಸರ್ಕಾರದ ಪಾಲನ್ನು ಶೇಕಡ 66.7 ರಿಂದ 50ಕ್ಕೆ ತಗ್ಗಿಸಲು ಬರೆಯಲಾಗಿರುತ್ತದೆ.

ಇ) ಈ ಕಾಮಗಾರಿಗಾಗಿ ಇದುವರೆಗೆ ರಾಜ್ಯ ಸರ್ಕಾರವು ರೂ. 40.00 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಕಾಮಗಾರಿಯನ್ನು ಶೀಘ್ರವಾಗಿ ಮುಗಿಸುವಂತೆ ರೈಲ್ವೆ ಬೋರ್ಡಿಗೂ ಪತ್ರವನ್ನು ಬರೆದು ಒತ್ತಾಯಿಸಲಾಗುತ್ತಿದೆ.

ಹನ್ನೆರಡನೇ ವಿಧಾನ ಸಭೆ

ಐದನೇ ಅಧಿವೇಶನ

ಬುಧವಾರ, ದಿನಾಂಕ 7ನೇ ಫೆಬ್ರವರಿ, 2007

ಕ್ರ. ಸಂ	ಪ್ರಶ್ನೆ ಸಂಖ್ಯೆ	ಸದಸ್ಯರ ಹೆಸರು ಶ್ರೀಯುತರುಗಳಾದ	ವಿಷಯ	ಸಂಬಂಧಪಟ್ಟ ಮಂತ್ರಿಗಳು
1	91(454)	ಚನ್ನಬಸವರಾಜ್ (ಅಪ್ಪಾಜಿ) ಶಂಕರಾವ್ ನಾಡಗೌಡ	ಯುಕೆಪಿಯ ಬಿ ಯೋಜನೆ ಕಾರ್ಯಗತಗೊಳಿಸುವುದು	ಮಾನ್ಯ ಜಲಸಂಪನ್ಮೂಲ ಸಚಿವರು
2	92(567)	ರೋಷನ್ ಬೇಗ್ ಆರ್	ರಾಜ್ಯದಲ್ಲಿ ವಸತಿ ರಹಿತರು	ಮಾನ್ಯ ವಸತಿ ಸಚಿವರು
3	93(936)	ಗುರುಪಾದಪ್ಪ ನಾಗಮಾರಪಲ್ಲಿ	ಬಚಾವತ್ ತೀರ್ಪು	ಮಾನ್ಯ ಜಲಸಂಪನ್ಮೂಲ ಸಚಿವರು

4	94(566)	ಕೃಷ್ಣಭೈರೇಗೌಡ ಸಿ.ಬಿ	ಆಶ್ರಯ ಯೋಜನೆಯ ಮನೆಗಳಿಗೆ ಅನುದಾನ ಬಿಡುಗಡೆ	ಮಾನ್ಯ ವಸತಿ ಸಚಿವರು
5	95(562)	ಸುರೇಶ್ ಎಸ್ ಮಾರಿಹಾಳ್	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
6	96(948)	ಪಾಟೀಲ್ ಎಂ.ವೈ	ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ತೆರೆಯುವ ಬಗ್ಗೆ	ಮಾನ್ಯ ಉನ್ನತ ಶಿಕ್ಷಣ ಸಚಿವರು
7	97 (458)	ನಾಗರಾಜು ಎಂ.ಟಿ.ಬಿ.	ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಬೇರ್ಪಡಿಸುವುದು	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
8	98(370)	ಗೋಪಾಲ ಪೂಜಾರಿ ಕೆ	ನಿವೇಶನ ನೀಡುವುದು	ಮಾನ್ಯ ವಸತಿ ಸಚಿವರು
9	99(373)	ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್	ಜೆ.ಓ.ಸಿ	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
10	100(697)	ಪಾಟಲ್ ಎ.ಬಿ.	ನೀರನ್ನು ಖಾಯಂ ಆಗಿ ಬಿಡುವ ಬಗ್ಗೆ	ಮಾನ್ಯ ಜಲಸಂಪನ್ಮೂಲ ಸಚಿವರು
11	101(939)	ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ	ಗೃಹಮಂಡಳಿ ವತಿಯಿಂದ ಮನೆಗಳ ನಿರ್ಮಾಣಕ್ಕೆ ಜಮೀನು ಖರೀದಿ	ಮಾನ್ಯ ವಸತಿ ಸಚಿವರು

12	102(853)	ದಿನೇಶ್ ಗುಂಡೂರಾವ್	ಲಕ್ಷ್ಮಣಪುರಿ (ಕೆಂಚಪ್ಪ ಗಾರ್ಡನ್) ಕೊಳಗೇರಿ ನಿವಾಸಿಗಳ ಬಗ್ಗೆ	ಮಾನ್ಯ ವಸತಿ ಸಚಿವರು
13	103(371)	ಕುಮಾರ್ ಬಂಗಾರಪ್ಪ ಎಸ್	ರಸ್ತೆಗಳ ರಿಪೇರಿಗೆ ಹಣ ಬಿಡುಗಡೆ	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
14	104(463)	ಡಾ: ಮಹಾದೇವಪ್ಪ ಹೆಚ್.ಸಿ	ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳ ಮಂಜೂರಾತಿ	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
15	105(681)	ಬಸವರಾಜ ರಾಯರೆಡ್ಡಿ ಪರವಾಗಿ ಎಸ್.ಎಸ್. ಪಾಟೀಲ್	ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸೈಕಲ್ ಒದಗಿಸಿರುವ ಕುರಿತು	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಸೋಮವಾರ ದಿನಾಂಕ:5.1.2007 ರಂದು 5ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಯನ್ನು ಬುಧವಾರ, ದಿನಾಂಕ:7.2.2007 ರಂದು ಪಟ್ಟಿ ಸಂಖ್ಯೆ 7ಕ್ಕೆ ಸೇರಿಸಲಾಗಿದೆ.

ಕ್ರ. ಸಂ	ಪ್ರಶ್ನೆ ಸಂಖ್ಯೆ	ಸದಸ್ಯರ ಹೆಸರು ಶ್ರೀಯುತರುಗಳಾದ	ವಿಷಯ	ಸಂಬಂಧಪಟ್ಟ ಮಂತ್ರಿಗಳು
1	73(447)	ಅಮರೇಗೌಡ ಪಾಟೀಲ್ ಬಯ್ಯಾಪುರ	ಗ್ರಾಮಗಳನ್ನು ಸ್ಥಳಾಂತರ ಮಾಡುವುದು	ಮಾನ್ಯ ಜಲಸಂಪನ್ಮೂಲ ಸಚಿವರು